ಮಗನ ಹೆಸರು ಕೂಗುತ್ತ ಕಾಡಿನ ಬಳಿ ಬಂದ ಮಿಜ್ರಾಡಿನ್ ಒಮ್ಮೆಲೇ ನಿಂತುಬಿಟ್ಟನು.

ಗುಂಡಿಯ ಪಕ್ಕದಲ್ಲಿ ಮರಕ್ಕೆ ಒರಗಿ ನಿಂತಿದ್ದಳು ಕಲ್ಯಾಣಿ.

ಅವಳ ಕಡೆ ನೋಡಿದನು. 'ಒಬ್ಬಳ ಜೊತೆ ಸೇರಿ ಮರ್ಡರ್ ಮಾಡಿದೆ' ಎಂದು ಮಗ ಫೋನ್‌ನಲ್ಲಿ ಹೇಳಿದ್ದು ನೆನಪಾಯ್ತು.

'ಯಾರು ನೀನು?' ಅನುಮಾನದಿಂದ ಕೇಳಿದನು ಮಿಜ್ರಾಡಿನ್.

'ಗಜೇಂದ್ರನ್ನ ಕಾಪಾಡಲಿಕ್ಕೆ ಚಕ್ರವಿಲ್ಲದೆ ಬಂದ ವಿಷ್ಣುವಿನ ಹಾಗೆ ಮಗನನ್ನು ರಕ್ಷಿಸಿಕೊಳ್ಳಲಿಕ್ಕೆ ಗಾರ್ಡ್ಸ್ ಇಲ್ಲದೆ ಬಂದು ಬಿಟ್ಟೆಯಾ, ರಿಯಾಜ್?' ಎಂದಳು.

'ನನ್ನ ಮಗ ಎಲ್ಲಿ?' ಕೇಳಿದನು.

'ನನ್ನ ಅಪ್ಪ ಎಲ್ಲಿ?'

ಆ ಮಾತನ್ನು ಅವನು ಕೇಳಿಸಿಕೊಳ್ಳಲಿಲ್ಲ; ಮತ್ತೆ ಕೇಳಿದನು.

'ಮೇರಾ ಬೇಟಾ ಕಿದರ್ ಹೈ?'

'ಕೆಳಗೆ ಗುಂಡಿಯೊಳಗೆ ಬಿದ್ದಿದ್ದಾನೆ, ನೋಡಿಕೋ' ಎಂದಳು.

ಮಿಜ್ರಾಡಿನ್ ಪ್ರೇಮ್‌ಜಿತ್‌ನನ್ನು ಕಂಡು ಅರಳಿದ ಮುಖದಿಂದ 'ಬೇಟಾ' ಎಂದು ಕೈ ಚಾಚಿದನು.

'ಬಹಳ ಆಳದಲ್ಲಿದ್ದಾನೆ, ಕೈಗೆ ಎಟುಕುವುದಿಲ್ಲ? ಅವನ ಹಿಂದೆ ನಿಂತು ಹೇಳಿದಳು.

'ಹೇಗೆ? ಈಗೇನು ಮಾಡುವುದು?' ಎಂದು ಮಿಜ್ರಾಡಿನ್ ಸುತ್ತಲೂ ನೋಡಿದನು ಕಳವಳದಿಂದ.

'ಮಗ ಗುಂಡಿಯೊಳಗೆ ಬಿದ್ದರೇ ಇಷ್ಟು ವಿಲಿವಿಲಿ ಗುಟ್ಟುತ್ತೀಯಲ್ಲ, ಗೋಕುಲ್ ಚಾಟ್ಸ್ ಹತ್ತಿರ ಆದ ಬ್ಲಾಸ್ಟ್‌ನಲ್ಲಿ ಎಷ್ಟೋ ಜನ ತಮ್ಮ ಹತ್ತಿರದ ಬಂಧುಗಳನ್ನು ಕಳೆದುಕೊಂಡರಲ್ಲ, ಅವರೆಷ್ಟು ದುಃಖಪಟ್ಟರೋ ಯೋಚಿಸು ರಿಯಾಜ್ ಹಸನ್' ಎಂದಳು.

ಆಗ ತಾನೆ ಸ್ಮೃತಿ ಬಂದ ಹಾಗೆ ಮಿಜ್ರಾಡಿನ್ ಅವಳ ಕಡೆ ನೋಡಿ, ಅನುಮಾನದಿಂದ 'ಯಾರು ನೀನು?' ಎಂದು ಮತ್ತೆ ಪ್ರಶ್ನಿಸಿದನು.

'ಜ್ಞಾಪಕ ಇಲ್ಲವಾ ಮಿಜ್ರಾಡಿನ್?'

'ನೀನು.... ನೀನು ಖಾನ್ ಮಗಳಲ್ಲವಾ?'

'ನಮ್ಮ ಮನೆಯಲ್ಲಿ ನಾನು ಕೇಳಿದ ಪ್ರಶ್ನೆಗೆ ನೀನು ಉತ್ತರ ಹೇಳಲಿಲ್ಲ, ಹೇಳಲಾರದೆ ಹೋದೆ. ಈಗಲಾದರೂ ಈ ಒಂದು ಪ್ರಶ್ನೆಗೆ ಉತ್ತರ ಹೇಳು. ಏನು ಸಾಧಿಸಬೇಕು ಅಂತ ಈ ಟೆರರಿಸಂ? ಈ ಪ್ರಶ್ನೆಗೆ ಸಮಾಧಾನ ಆಗುವ ಹಾಗೆ ಉತ್ತರ ಹೇಳಿದರೆ ನಿನ್ನ ಮಗ ಹೊರಗೆ ಬರಲಿಕ್ಕೆ ಸಹಾಯ ಮಾಡುತ್ತೇನೆ, ಹೇಳು, ಏಕೆ ಈ ಜಿಹಾದ್?'

'ಒಂದು ಸಾರಿ ಕಾಶ್ಮೀರ್‌ಗೆ ಬಂದು ನೋಡು, ನಿನ್ನ ಪ್ರಶ್ನೆಗೆ ಅಲ್ಲೇ ಉತ್ತರ ಸಿಗುತ್ತದೆ'

'ಭಾರತ ದೇಶದಿಂದ ಬೇರ್ಪಟ್ಟರೆ ತಾವು ಇನ್ನಷ್ಟು ಸುಖವಾಗಿರುತ್ತೇವೆ ಎಂದು ಬಹಳ ಮಂದಿ ಕಾಶ್ಮೀರಿಗಳೇ ನಂಬುವುದಿಲ್ಲ'

'ತನ್ನ ಸಿದ್ಧಾಂತಗಳಿಗೆ ಪ್ರತಿಯೊಬ್ಬನೂ ಡಿಫೆನ್ಸ್ ಲಾಯರೇ, ಬೇರೆಯವರ ವಾದಕ್ಕೆ ಮಾತ್ರ ಪ್ರಾಸಿಕ್ಯೂಟರ್.'

'ಆದರೆ ಜಡ್ಜ್‌ಮೆಂಟ್ ಹೇಳುವುದು ಮಾತ್ರ ಕಡೆಗೆ ನ್ಯಾಯವೇ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಡಿಫೆನ್ಸ್ ಲಾಯರಾ? ಪ್ರಾಸಿಕ್ಯೂಟರಾ?'

'ಶ್ರೀಕೃಷ್ಣ? ಅವನ್ಯಾರು?'

'ಪರಿತ್ರಾಣಾಯ ಸಾಧೂನಾಂ ಅಂದವನು'

'ಅಂದರೆ'

'ಧರ್ಮಾತ್ಮರನ್ನು ರಕ್ಷಿಸುವುದಕ್ಕೆ, ದುರಾತ್ಮರ ಸಂಹಾರಕ್ಕೆ, ಧರ್ಮವನ್ನು ಪುನರ್ ಸ್ಥಾಪಿಸುವುದಕ್ಕೆ ನಾನು ಪ್ರತಿ ಯುಗದಲ್ಲಿ ಅವತಾರ ಎತ್ತಿ ಬರುತ್ತೇನೆ– ಅಂತ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನ್ ಹೇಳಿದ್ದಾನೆ'

ಮಿಜ್ರಾಡಿನ್ ಪಿಸ್ತೂಲ್ ತೆಗೆದು ಅವಳ ಕಡೆಗೆ ಗುರಿ ಇಟ್ಟು 'ನೋಡೋಣ, ಯಾರು ದುರಾತ್ಮರೋ, ಯಾವ ದೇವರು ಹೇಳಿದ್ದು ಕರೆಕ್ಟೋ ಅಂತ' ಎಂದು ಟ್ರಿಗರ್ ಮೇಲೆ ಬೆರಳಿಟ್ಟನು.

'ಢಂ' ಎಂದು ದೊಡ್ಡ ಸದ್ದು ಕೇಳಿಸಿತು.

ಹಳ್ಳದಲ್ಲಿದ್ದ ಪ್ರೇಮ್‌ಜಿತ್ ತಲೆ ಎತ್ತಿ ನೋಡಿದನು. ಮೇಲೆ ಏನು ನಡೆಯುತ್ತಿದೆಯೋ ತಿಳಿಯಲಿಲ್ಲ.

ಹಿಂದಿನಿಂದ ನಡೆದು ಬರುತ್ತಾ ಕೃಷ್ಣ ಪಿಸ್ತೂಲನ್ನು ಒಳಗೆ ಇಡುತ್ತಾ ಕೇಳಿದನು 'ಈ ರೀತಿಯ ರಿಸ್ಕ್ ತೆಗೆದುಕೊಳ್ಳುವುದನ್ನು ನೀವು ಯಾವತ್ತೂ ಬಿಡುವುದಿಲ್ಲವೇ?'

## 20

'ಬಿತ್ತನೆಯನ್ನು ಚೆಲ್ಲುತ್ತಾ ಹೋದರೆ, ಮರಳಿ ಬರುವಾಗ ಸಸಿಗಳು ಮೊಳೆತಿರುತ್ತವೆ' ಎಂಬ ಸುಭಾಷಿತವನ್ನು ಹಿದೆಲ್ಲೋ ಓದಿದ್ದೆನಮ್ಮಾ. ಆ ಮಾತು ಆಗ ಅರ್ಥವಾಗಿರಲಿಲ್ಲ. ಈಗ ಅರ್ಥವಾಯಿತು. ನನ್ನ ಋಣವನ್ನು ನೀನು ಈ ರೀತಿ ತೀರಿಸುತ್ತೀಯ ಅಂದುಕೊಂಡಿರಲಿಲ್ಲ.'

'ಇದರಲ್ಲಿ ಋಣದ ಪ್ರಶ್ನೆ ಎಲ್ಲಿದೆ ಅಪ್ಪಾ?'

'ಹೋಗಲಿ ಪ್ರೀತಿ ಅನ್ನು. ಇದೀಗ ಚೀಫ್ ಬಂದು ಹೋದರು. ನೀನೆಷ್ಟು ಟೆನ್ಷನ್ ಮಾಡಿಕೊಂಡಿದ್ದೆ ಅಂತ ಅವರು ಹೇಳಿದರು. ಯಾವ ಮಗಳೂ ಇಷ್ಟು ರಿಸ್ಕ್ ತೆಗೆದುಕೊಳ್ಳುವುದಿಲ್ಲಮ್ಮಾ'.

'ಪ್ರೀತಿ ಇರುವ ಜಾಗದಲ್ಲಿ ರಿಸ್ಕ್ ಬಗ್ಗೆ ಯೋಚನೆ ಇರುವುದಿಲ್ಲ ಅಪ್ಪಾ. ಅದೂ ಅಲ್ಲದೆ ನಿಮಗೆ ಹೇಳುವಷ್ಟು ದೊಡ್ಡವಳೂ ನಾನಲ್ಲ.... ಚೆನ್ನಾಗಿ ವಿಶ್ರಾಂತಿ ತೆಗೆದುಕೊಳ್ಳಿ... ನಾಳೆ ಡಿಸ್ಚಾರ್ಜ್ ಮಾಡುತ್ತೇವೆಂದು ಡಾಕ್ಟರ್ ಹೇಳಿದರು'

***

'ಜೈಲ್‌ನಲ್ಲಿ ಪ್ರೇಮ್ ಆತ್ಮಹತ್ಯೆ ಮಾಡಿಕೊಂಡನಂತೆ' ಎಂದನು ಕೃಷ್ಣ.

'ಅಪ್ಪಂದಿರು ಚೆನ್ನಾಗಿದ್ದರೆ ಅಬ್ದುಲ್ ಕಲಾಂಗಳಾಗುತ್ತಾರೆ, ಅಮ್ಮಂದಿರು ಚೆನ್ನಾಗಿದ್ದಾರೆ ಮದರ್ ಥೆರೆಸಾಗಳಾಗುತ್ತಾರೆ. ಇಲ್ಲದಿದ್ದರೆ ಬಿನ್ ಲಾಡೆನ್‌ಗಳಾಗುತ್ತಾರೆ'

ಇಬ್ಬರೂ ಹೋಟೆಲ್‌ನ ಒಂದು ಮೂಲೆಯಲ್ಲಿ ಕುಳಿತಿದ್ದರು.

'ಹೆಂಡಂದಿರು ಚೆನ್ನಾಗಿದ್ದರೆ ಗಂಡಂದಿರು ಆನಂದವಾಗಿರುತ್ತಾರೆ. ಇಲ್ಲದಿದ್ದರೆ ಕುಡುಕರಾಗುತ್ತಾರೆ' ಎಂದನು ಕೃಷ್ಣ ನಗುತ್ತಾ.

'ನಾನು ಒಪ್ಪಿಕೊಳ್ಳುವುದಿಲ್ಲ' ಎಂದು ಕಲ್ಯಾಣಿ – 'ಹೆಂಡತಿಯರು ಚೆನ್ನಾಗಿದ್ದರೆ ಗಂಡಂದಿರು ಬೇಜವಾಬ್ದಾರಿಯವರಾಗಿ ಮನೆಗೆ ತಡವಾಗಿ ಬರುತ್ತಾರೆ. ಹೆಂಡತಿಯರು ಚೆನ್ನಾಗಿಲ್ಲದಿದ್ದರೆ ಆ ಒಂಟಿತನಕ್ಕೆ ಕಲಾವಿದರೋ, ನಿರ್ದೇಶಕರೋ, ವ್ಯಾಪಾರಿಗಳೋ ಆಗಿ ಅಭಿವೃದ್ಧಿ ಸಾಧಿಸುತ್ತಾರೆ' ಎಂದಳು ಕಲ್ಯಾಣಿ.

'ನಿಮ್ಮ ಥಿಯರಿಗಳು ನನಗ್ಯಾವತ್ತೂ ಅರ್ಥವಾಗುವುದಿಲ್ಲ ಕಲ್ಯಾಣೀ. ಸರಿ, ಆ ವಿಷಯ ಬಿಡಿ.... ನನ್ನನ್ನು ಅದೃಷ್ಟವಂತನಾಗಿ ಮಾಡುತ್ತೀರಾ?'

ಅವಳು ತಲೆ ಎತ್ತಿ ಅವನ ಕಡೆ ನೋಡಿದಳು.

'ನಾವಿಬ್ಬರೂ ಸೇರಿ ಸ್ವಲ್ಪ ಕಾಲ ಸಂಸಾರ ಮಾಡಿದೆವು. ಅಫ್‌ಕೋರ್ಸ್ ನಟಿಸಿದೆವು ಅಂದುಕೊಳ್ಳಿ! ಅದನ್ನು ಸತ್ಯ ಮಾಡೋಣವೇ?'

ಅವಳು ಯೋಚನೆ ಮಾಡುತ್ತ ಅವನ ಕಡೆ ನೋಡಿದಳು.

'ಈಗ ಎಲ್ಲರೆದುರು ಮೊಳಕಾಲೂರಿ ಕುಳಿತು ನಿಮಗೊಂದು ಗುಲಾಬಿ ಹೂ ಕೊಟ್ಟು 'ನನ್ನ ಪ್ರೀತಿಯನ್ನು ಸ್ವೀಕರಿಸುತ್ತೀರಾ?' ಎನ್ನಲಾರೆ. ನೋಡುವವರಿಗೆ ಸರಿ ಕಾಣುವುದಿಲ್ಲ. ಆದರೆ ನೀವು ಸರಿ ಅಂದರೆ ಮಾತ್ರ ನನಗೆ ಬಹಳ ಸಂತೋಷವಾಗುತ್ತದೆ'

ಅವಳು ಬಹಳ ಹೊತ್ತು ಮಾತಾಡಲಿಲ್ಲ. ಅವಳೇನು ಹೇಳುತ್ತಾಳೋ ಎಂದು ಕೃಷ್ಣ ಕಾತುರದಿಂದ ಅವಳನ್ನೇ ನೋಡುತ್ತಿದ್ದನು. ವೇಟರ್ ಬಂದು ಇಬ್ಬರ ಮುಂದೆ ಕಾಫಿ ಕಪ್ಸ್ ಇಟ್ಟು ಹೊರಟು ಹೋದನು.

ಅವಳು ಹೇಳಿದಳು: 'ನಾವಿಬ್ಬರೂ ಗಂಡ ಹೆಂಡತಿಯಾಗಿ ನಟಿಸಿದೆವು. ಆದರೆ ನೀವು ಯಾವತ್ತೂ ಹದ್ದುಮೀರಿ ನಡೆದುಕೊಳ್ಳಲಿಲ್ಲ. ಸಂಸ್ಕಾರವಂತರ ಹಾಗೆ ನಡೆದುಕೊಂಡಿರಿ. ಆದರೆ ಪ್ರಪಂಚದಲ್ಲಿ ಗಂಡಸರೆಲ್ಲರೂ ನಿಮ್ಮ ಹಾಗೆ ಇರುವುದಿಲ್ಲ... ನಾನು ನಿಮ್ಮ ಜೊತೆ ಒಂದು ವಿಷಯ ಹಂಚಿಕೊಳ್ಳಬೇಕು'

ಅವನು ತಲೆ ಎತ್ತಿ ಪ್ರಶ್ನಾರ್ಥಕವಾಗಿ ಅವಳ ಕಡೆ ನೋಡಿ, ಅವಳು ಏನೋ ಹೇಳಲು ಹೊರಟಾಗ 'ಕಲ್ಯಾಣೀ, ನೀವು 'ನೋ' ಅಂದರೂ ನಾವಿಬ್ಬರು ಸ್ನೇಹಿತರಾಗಿಯೇ ಇರಬಹುದು– ಅಂತ ಸಾಧಾರಣ ಪ್ರೇಮಿಗಳ ಹಾಗೆ ಮಾತಾಡುವುದಿಲ್ಲ. ನೀವು 'ಎಸ್' ಎಂದರೆ ಸಂತೋಷಪಡುತ್ತೇನೆ'

'ನಾನು ಯೋಚಿಸುವುದು ಅದಲ್ಲ ಕೃಷ್ಣಾ', ಎಂದಳು ಕಲ್ಯಾಣಿ 'ಈ ಇಡೀ ವ್ಯವಹಾರದಲ್ಲಿ ನಾವು ಅಂದುಕೊಳ್ಳದ ಒಂದು ಘಟನೆ ನಡೆಯಿತು.'

'ಯಾವುದದು?'

'ನನ್ನ ತಂದೆಯನ್ನು ತೋರಿಸುತ್ತೇನೆಂದೂ, ಅದಕ್ಕೆ ಪ್ರತಿಫಲವಾಗಿ ತನ್ನ ಬಯಕೆಯನ್ನು ತೀರಿಸಬೇಕೆಂದೂ ಆ ಪ್ರೇಮ್‌ಜೀತ್ ಆ ರಾತ್ರಿ ಕೇಳಿದ. ಅವನು ಸುಳ್ಳು ಹೇಳುತ್ತಿದ್ದಾನೆಂದು ತಿಳಿದಿತ್ತು. ಆದರೆ ನಂಬಿದಂತೆ ನಟಿಸಬೇಕಾಯ್ತು. ಹಾಗೆ ಮಾಡದಿದ್ದರೆ ಅವನು ನಮ್ಮನ್ನು